


# ಕಳ್ಳನು ಸಂನ್ಯಾಸಿಯಾದದ್ದು

ಮಹೇಂದ್ರನಾಥ ದತ್ತ ತಮ್ಮ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ: ೧೮೯೩ನೇ ವರ್ಷದ ದುರ್ಗಾಷ್ಟಮಿಯ ಪೂಜೆಯ ದಿನ ನಾನು ಗಾಜೀಪುರದ ಮುನ್ಸೀಫ್ ಆದ ಶ್ರೀಶಚಂದ್ರ ಬಸು ಅವರೊಡನೆ ಪವಾಹಾರಿ ಬಾಬಾ ಆಶ್ರಮಕ್ಕೆ ಹೋದೆನು. ಆಗ ಆಶ್ರಮದಲ್ಲಿ ಇದ್ದವರು ಇಬ್ಬರೇ. ಒಬ್ಬರು ಬಾಬಾ ಅವರ ಸಹೋದರ. ಅವರು ನೋಡಲು ಎತ್ತರವಾಗಿದ್ದರು. ಇನ್ನೊಬ್ಬರು ಅವರ ಸಂನ್ಯಾಸಿ ಶಿಷ್ಯ. ಇವರು ಬಾಬಾ ಅವರ ಪ್ರಧಾನ ಶಿಷ್ಯ. ನಾವೆಲ್ಲ ಪವಾಹಾರಿ ಬಾಬಾ ಅವರ ವಿಷಯವಾಗಿ ಮಾತನಾಡುತ್ತಿದ್ದೆವು. ಆಗ ಆ ಸಂನ್ಯಾಸಿ ಶಿಷ್ಯರು ಬಹು ವಿನೀತಭಾವದಿಂದ ತಮ್ಮ ಆತ್ಮಕಥೆಯನ್ನು ಹೀಗೆ ಹೇಳಿಕೊಂಡರು:

ಪವಾಹಾರಿ ಬಾಬಾ ಅವರ ಆಶ್ರಮದ ಎದುರು ದಿಕ್ಕಿನ ಗಂಗಾನದಿಯ ತಟದಲ್ಲಿರುವ ಒಂದು ಗ್ರಾಮದ ಬ್ರಾಹ್ಮಣ ಕುಟುಂಬದಲ್ಲಿ ನನ್ನ ಜನನವಾಯಿತು. ಸಾಂಸಾರಿಕ ಜೀವನ ನಡೆಸುತ್ತಿದ್ದೆ. ಸಂಸಾರ ನಿರ್ವಹಣೆಗಾಗಿ ಹಣ ಸಂಪಾದನೆ ಮಾಡುವುದು ಬಹಳ ಕಷ್ಟವಾಯಿತು. ನನ್ನ ಈ ಸಮಸ್ಯೆಗೆ ಪರಿಹಾರ ಸಿಕ್ಕಿದ್ದು ಡಕಾಯಿತಿ ಮಾಡುವುದರಲ್ಲಿ. ಆ ಕಸುಬಿನಲ್ಲಿ ನಾನು ಸಿದ್ಧಹಸ್ತನಾದೆ. ಒಂದು ದಿನ ಈ ಯೋಚನೆ ನನ್ನ ಮನಸ್ಸಿಗೆ ಬಂದಿತು: "ಗಂಗೆಯ ಆಚೆಯ ದಡದಲ್ಲಿ ಒಬ್ಬ ತಿಳಿಗೇಡಿ ಸಾಧು ಇದ್ದಾರೆ. ಅವರ ಆಶ್ರಮದಲ್ಲಿ ಅಕ್ಕಿ, ಬೇಳೆ, ಪಾತ್ರೆ ಪಡಗ, ಕಂಬಳಿ ಇತ್ಯಾದಿ ನಿಶ್ಚಯವಾಗಿ ಇದ್ದೇ ಇರುತ್ತವೆ. ಇಂದು ಅಲ್ಲಿಗೇ ಹೋಗುತ್ತೇನೆ. ಕೈಗೆ ಸಿಕ್ಕಷ್ಟು ಕದ್ದು ತರುತ್ತೇನೆ" – ಹೀಗೆ ನಿಶ್ಚಯಮಾಡಿದೆ.

ರಾತ್ರಿಯಾಗುವುದನ್ನೇ ಕಾಯುತ್ತ ಕುಳಿತೆ. ಆಗ ಗಂಗೆಯ ನೀರು ಜಾಸ್ತಿಯೇನೂ ಇರಲಿಲ್ಲ. ಕೈಯಲ್ಲಿ ದೊಣ್ಣೆ ಹಿಡಿದು, ನದಿಯಲ್ಲಿ ಆಳವಿಲ್ಲದ ಕಡೆ ನೋಡಿಕೊಂಡು, ನಡೆಯಲಾರಂಭಿಸಿದೆ. ಸ್ವಲ್ಪದೂರ ಈಜಿಕೊಂಡು ದಡ ಸೇರಿದೆ. ಪವಾಹಾರಿ ಬಾಬಾ ಅವರ ಆಶ್ರಮವನ್ನು ತಲುಪಿ ಸುಲಭವಾಗಿ ಒಳಗೆ ಹೋದೆ. ಸುತ್ತಲೂ ಅಂಧಕಾರ; ಕಣ್ಣಿಗೆ ಏನೂ ಕಾಣಿಸದು. ಕೈ ಆಡಿಸುತ್ತಾ ತಡಕಾಡುತ್ತಾ ಇದ್ದಾಗ, ಒಂದು ಕಂಬಳಿ ಸಿಕ್ಕಿತು. ಅದನ್ನು ನೆಲದ ಮೇಲೆ ಹಾಸಿ, ಅಕ್ಕಿ, ಬೇಳೆ ಮತ್ತು ಕೈಗೆ ಸಿಕ್ಕಿದ್ದೆಲ್ಲವನ್ನೂ ಅದರ ಮೇಲೆ ಹಾಕಿ ದೊಡ್ಡ ಗಂಟುಕಟ್ಟಿ ಹೊತ್ತುಕೊಂಡು, ಆನಂದದಿಂದ ಮನೆಯ ಕಡೆಗೆ ನಡೆದೆ. ಗಂಗೆಯನ್ನು ದಾಟಿ, ದಡ ಸೇರಿ, ಒಂದು ಸಲ ಹಿಂತಿರುಗಿ ನೋಡಿದೆ. ಎದೆ ಝಲ್ಲೆಂದಿತು! ಭಯದಿಂದ ನಡುಗಿಹೋದೆ. ನನ್ನಂತೆಯೇ ಮತ್ತೊಬ್ಬ ವ್ಯಕ್ತಿ ಒಂದು ಬಟ್ಟೆಮೂಟೆ ಹೊತ್ತುಕೊಂಡು, ನನ್ನ ಹಿಂದೆಯೇ ಸ್ವಲ್ಪದೂರದಲ್ಲಿಯೇ ಬರುತ್ತಿದ್ದಾನೆ! ನಾನು ದಾಪುಗಾಲು ಹಾಕತೊಡಗಿದೆ. ಆ ವ್ಯಕ್ತಿಯೂ ವೇಗಗತಿಯಲ್ಲಿ ಹಿಂಬಾಲಿಸತೊಡಗಿದ. ಬೇರೆ ಉಪಾಯಕಾಣದೆ ಓಡಲು ಪ್ರಾರಂಭಿಸಿದೆ. ಅವನಾದರೋ, "ನಿಲ್ಲು, ಓಡಬೇಡ, ನಿಲ್ಲು" ಎನ್ನುತ್ತ ಓಡಿಬರತೊಡಗಿದ. ಸ್ವಲ್ಪದೂರ ಓಡುತ್ತಲೇ ನನಗೆ ಮೇಲುಸಿರು ಬರತೊಡಗಿತು. ಓಡುವುದಿರಲಿ ಬಂತು, ನಡೆಯುವುದೂ ಅಸಾಧ್ಯವಾಗಿತ್ತು. ಅಷ್ಟರಲ್ಲಿ ಆ ವ್ಯಕ್ತಿಯೂ ನನ್ನನ್ನು ಸಮೀಪಿಸಿ ಸ್ನೇಹಪೂರ್ಣವಾದ ಅತಿ ಮಧುರ ಸ್ವರದಲ್ಲಿ ಹೇಳತೊಡಗಿದನು: " 'ಓಡಬೇಡವೋ, ಏಕೆ ಓಡುತ್ತೀಯಾ, ಉಸಿರು ಕಟ್ಟಿಕೊಳ್ಳುತ್ತದೆ, ನಿಲ್ಲು, ನಿಲ್ಲು' ಎಂದು ಕೂಗಿಕೊಳ್ಳುತ್ತಿದ್ದರೂ ಓಡಿಬಂದೆಯಲ್ಲಾ, ಯಾಕಯ್ಯಾ?" ಬೇರೆ ದಾರಿ ಕಾಣದೆ ನಿರುಪಾಯನಾಗಿ ನಿಂತುಬಿಟ್ಟೆ. ಭಯದಿಂದ ಥರಥರನೆ ನಡಗುತ್ತಿದ್ದೆ. ನನಗೆ ಸಾವೇ ಸಮೀಪಿಸಿದಂತೆ ಅನಿಸಿತು. ಆ ಕೂಡಲೆ ಕದ್ದಿದ್ದ ಮಾಲನ್ನು ಅವರ ಮುಂದಿರಿಸಿ, "ನನ್ನನ್ನು ಪೋಲೀಸರ ಕೈಗೆ ಕೊಡಬೇಡಿ. ನನ್ನನ್ನು ಹೊಡೆಯಬೇಡಿ. ನಿಮ್ಮ ಪದಾರ್ಥಗಳನ್ನೆಲ್ಲ ತೆಗೆದುಕೊಳ್ಳಿ. ನಾನೊಬ್ಬ ಬ್ರಾಹ್ಮಣ. ನನ್ನ ಮೇಲೆ ದಯೆತೋರಿ" ಎಂದು ಅಂಗಲಾಚಿ ಬೇಡಿದೆ. ಅವರು ದಯೆತುಂಬಿದ ಸ್ವರದಲ್ಲಿ ಹೇಳಿದರು: "ಯಾಕಯ್ಯಾ ಇಷ್ಟು ಹೆದರಿಕೆ? ಇಷ್ಟು ಉದ್ವಿಗ್ನನಾಗುತ್ತಿದ್ದೀಯಲ್ಲ, ಯಾಕಪ್ಪಾ? ನಿನಗೆ ಪರಿಚಯವಿಲ್ಲದ ಸ್ಥಳ. ಎಲ್ಲೆಲ್ಲಿ ಏನೇನು ಇದೆ ಎಂದು ನಿನಗೆ ತಿಳಿಯದು. ಆದ್ದರಿಂದ ಎಷ್ಟೋ ಸಾಮಾನು ಅಲ್ಲಿಯೇ ಬಿಟ್ಟುಬಂದಿದ್ದೀಯೆ. ನಿನಗೆ ಮಕ್ಕಳು ಮರಿ ಸಂಸಾರ ಇದೆ. ಈ ಪದಾರ್ಥಗಳೆಲ್ಲವೂ ನಿನಗೆ ಅಗತ್ಯವಾಗಿ ಬೇಕಾಗುತ್ತವೆ. ಆದ್ದರಿಂದ ನಾನು ಈ ಎಲ್ಲಾ ಉಳಿದ ಸಾಮಾನುಗಳನ್ನು ನಿನ್ನ ಮನೆಗೆ ತಲುಪಿಸಲು ಬರುತ್ತಿದ್ದೇನೆ. ಇದನ್ನು ತಿಳಿಯದೆ ನೀನು ಹಾಗೇಕೆ ಓಡುತ್ತಿದ್ದೀಯೇ? ಈಗ ನಿನ್ನ ಜೊತೆಗೆ ಬೇಗ ಬೇಗ ನಡೆಯಲು ನನಗೆ ಸಾಧ್ಯವಿಲ್ಲ. ನೀನು ಸ್ವಲ್ಪ ನಿಧಾನವಾಗಿ ನಡೆ. ಈ ಸಾಮಾನನ್ನೆಲ್ಲ ನಿನ್ನ ಮನೆಯಲ್ಲಿಟ್ಟು ಹಿಂತಿರುಗುತ್ತೇನೆ." ಇಷ್ಟರಲ್ಲಿ ಈ ಮಹಾತ್ಮರು ಯಾರು ಎನ್ನುವ ವಿಷಯ ನನಗೆ ತಿಳಿದುಹೋಯಿತು. ಇವರ ಸ್ನೇಹಪೂರಿತ ಮಾತು, ನನ್ನ ಅಂತರಂಗದಲ್ಲಿ ನನಗೆ ಅರಿವಾಗದ ಒಂದು ಅಲ್ಲೋಲಕಲ್ಲೋಲವನ್ನು ಉಂಟುಮಾಡಿತ್ತು. ಎಂಥ ಅಕಾರ್ಯ ಮಾಡಿದೆ? ಯಾರ ಮನೆಯಲ್ಲಿ ಕದಿಯಲು ಹೋದೆ? ಈ ಮಹಾತ್ಮರಿಗೆ ಕಷ್ಟಕೊಟ್ಟೆನಲ್ಲ! ನನ್ನ ಮನೆಗೆ, ಸಂಸಾರಕ್ಕೆ ಧಿಕ್ಕಾರವಿರಲಿ ಎನ್ನಿಸಿತು. ಆಕೂಡಲೇ ಸಾಧುಗಳ ಪಾದಗಳ್ನು ತಬ್ಬಿಹಿಡಿದುಕೊಂಡು, ಅಳತೊಡಗಿದೆ. ಪಾದಗಳನ್ನು ಬಿಡದೆ ಪ್ರಾರ್ಥಿಸಿದೆ, "ಸ್ವಾಮಿ, ನನಗೆ ಆಶ್ರಯಕೊಡಿ. ಈ ಜಗತ್ತಿನಲ್ಲಿ ನನಗೆ ದಯೆ ತೋರುವವರು ಯಾರೂ ಇಲ್ಲ. ತಾವು ಕರುಣೆತೋರಿ, ಕೃಪೆಮಾಡಿ ನನ್ನನ್ನು ತಮ್ಮ ಬಳಿ ಇರಿಸಿಕೊಳ್ಳಿ. ಈ ಪಾಪಿಯನ್ನು ಉದ್ಧಾರಮಾಡಿ." ಹೀಗೆ ಬಹಳಷ್ಟು ಬೇಡಿಕೊಂಡ ನಂತರ ಅವರು ಅದಕ್ಕೆ ಒಪ್ಪಿಗೆ ಕೊಟ್ಟರು. ಇಬ್ಬರೂ ಮೂಟೆಗಳನ್ನು ಹೊತ್ತು, ಆಶ್ರಮಕ್ಕೆ ಹಿಂತಿರುಗಿದೆವು. ಅಂದಿನಿಂದ ನಾನು ಇಲ್ಲಿಯೇ ಇದ್ದೇನೆ. ಇವರ ಸೇವೆ ಮಾಡುತ್ತಿದ್ದೇನೆ. ಹಿಂದೆ ನಾನೊಬ್ಬ ಕಳ್ಳನಾಗಿದ್ದೆ. ಇಂದು ನಾನೊಬ್ಬ ಸಾಧು, ಸಂನ್ಯಾಸಿ. ಇದು ಈ ಮಹಾತ್ಮರ ಮಹಿಮೆ. ಇದು ನನ್ನ ಹಿಂದಿನ ಕಥೆ, ಸ್ವಾಮಿ.

ಆ ಶಿಷ್ಯರ ವಯಸ್ಸು ಆಗ ೫೫–೬೦ ಇದ್ದೀತು. ಅವರದು ಸರಳವಾದ ಮನಸ್ಸು. ಅದಕ್ಕಾಗಿಯೇ ತಮ್ಮ ಕಥೆ ಎಲ್ಲವನ್ನೂ ನಮಗೆ ಹೇಳಿಬಿಟ್ಟರು. ಈ ಕಥೆಯನ್ನು ಕೇಳಿದಾಗ, ಅವರನ್ನು ನೋಡಿದಾಗ, ಇವರು ನಿಜವಾಗಿಯೂ ಸಾಧು ಆಗಿಬಿಟ್ಟಿದ್ದಾರೆ ಎನ್ನಿಸಿತು; ಪವಾಹಾರಿ ಬಾಬಾ ಅವರ ಕೃಪೆಯಿಂದ ಪರಮಶಾಂತಿಯನ್ನು ಖಂಡಿತ ಪಡೆದುಕೊಂಡಿದ್ದಾರೆ ಅನ್ನಿಸಿತು. (ಆಧಾರ)

# ಭಗವದ್ಗೀತಾ ತತ್ತ್ವಸೌರಭ



**ಸ್ವಾ**ಮಿ ವಿವೇಕಾನಂದರು ಹೇಳುವಂತೆ ನಾವು ಅಸತ್ಯದಿಂದ ಸತ್ಯದೆಡೆಗೆ ಹೋಗುತ್ತಿರುವುದಿಲ್ಲ, ಕೆಳಗಿನ ಸತ್ಯದಿಂದ ಮೇಲಿನ ಸತ್ಯದೆಡೆಗೆ ಮುಂದುವರೆಯುತ್ತಿರುವೆವು. ಪ್ರತಿಯೊಬ್ಬರೂ ಈ ಮಹಾಯಾತ್ರೆಯ ಬೇರೆ ಬೇರೆ ಹಂತಗಳಲ್ಲಿರುವರು. ಕೆಲವರು ಹೆಚ್ಚು ಎಡವುತ್ತಾರೆ, ಮತ್ತೆ ಕೆಲವರು ಕಡಮೆ ಎಡವುತ್ತಾರೆ. ಹೆಚ್ಚು ಎಡವುವರನ್ನು ಕೆಟ್ಟವರೆನ್ನುತ್ತೇವೆ. ಕಡಮೆ ಎಡವುವರನ್ನು ಒಳ್ಳೆಯವರೆನ್ನುತ್ತೇವೆ. "ಪ್ರತಿಯೊಬ್ಬ ದಾರಿಹೋಕನನ್ನು, ಅವನು ಒಳ್ಳೆಯವನಾಗಿರಲಿ, ಕೆಟ್ಟವನಾಗಿರಲಿ, ದೇವರು ಸರಳಪಳಿಯನ್ನು ಕಟ್ಟಿ ತನ್ನ ಸನ್ನಿಧಿಗೆ ಎಳೆದುಕೊಳ್ಳುತ್ತಿರುವನು" ಎಂದು ಪ್ರಸಿದ್ಧ ಸೂಫಿಸಂತ ಜಲಾಲ್ ಉಲ್ ದಿನ್ ರೂಮಿ ಹೇಳುತ್ತಾನೆ.

ಎಲ್ಲರೂ ತಮ್ಮ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ, ತಮ್ಮ ದೇಹಮನೋಬುದ್ಧಿಗಳ ಬೆಳವಣಿಗೆಗೆ ಅನುಸಾರವಾಗಿ ಬೆಳಕಿನೆಡೆಗೆ ಮುಂದುವರಿಯುತ್ತಿರುವರು. ಯಾರನ್ನೂ ನಾವು ದೂಷಿಸುವಂತಿಲ್ಲ, ಅಲ್ಲಗೆಳೆಯುವಂತಿಲ್ಲ. ದುಷ್ಟನನ್ನೂ ಕೂಡ, ಎಡವಿಬಿದ್ದವನನ್ನು ಮೇಲೆತ್ತಿ ಮುನ್ನಡೆಸುವಂತೆ, ಸನ್ಮಾರ್ಗವನ್ನು ತೋರಿಸಿ ಸಹಕರಿಸಲು ಪ್ರಯತ್ನಿಸಬೇಕು. ಆದರೆ ಯಾರ ನಂಬಿಕೆಯನ್ನೂ ಕೆಡಿಸಿ, ಮನಸ್ಸಿನಲ್ಲಿ ಗೊಂದಲವನ್ನು ಉಂಟುಮಾಡುವ ಪ್ರಯತ್ನಮಾಡಬಾರದು, ಯಾರನ್ನೂ ಅತಂತ್ರ ಸ್ಥಿತಿಗೆ ತಳ್ಳಬಾರದು. ಮನಸ್ಸಿನಲ್ಲಿ ಸಂಶಯಬೀಜವನ್ನು ಬಿತ್ತಿದರೆ, ಆಗಲೇ ಸೋಲುನೋವುಗಳ ನೀರು ಗೊಬ್ಬರಗಳನ್ನು ಪಡೆದು, ಆ ಬೀಜವು ಮುಂದೆ ಹೆಮ್ಮರವಾಗಿ ಬೆಳೆಯುತ್ತದೆ. ತಾವು ಮಾತ್ರ ಸರಿ, ತಾವು ಅನುಸರಿಸುವ ಮಾರ್ಗವೇ

## ಬುದ್ಧಿಭೇದವನ್ನು ಮಾಡಬಾರದು

ಸರಿಯಾದ ಮಾರ್ಗ ಎಂದು ಭಾವಿಸುವ 'ಉದ್ಧಾರಕ ಗೀಳಿ'ನಿಂದ (saviour's complex) ನರಳುವ ಅನೇಕ ಧಾರ್ಮಿಕ ವ್ಯಕ್ತಿಗಳು, ತಮ್ಮ ಭಾವನೆಗಳನ್ನು ಇತರರ ಮೇಲೆ ಹೇರುತ್ತ ಅನೇಕರನ್ನು ಮಾರ್ಗಭ್ರಷ್ಟರನ್ನಾಗಿ ಮಾಡುತ್ತಾರೆ. ನಾವು ಒಂದು ಮರದಿಂದ ಇನ್ನೊಂದು ಮರಕ್ಕೆ ದಾಟುವಾಗ, ಇನ್ನೊಂದು ಮರದ ಕೊಂಬೆಯನ್ನು ಭದ್ರವಾಗಿ ಹಿಡಿದುಕೊಳ್ಳದೆ ನಾವಿರುವ ಮರವನ್ನು ಬಿಡಬಾರದು. ಶ್ರೀರಾಮಕೃಷ್ಣರು ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಾರೆ: ತಾಯಿಯು ಮೀನನ್ನು ಕೊಂಡುಕೊಂಡು ಬರುತ್ತಾಳೆ. ಅದರಿಂದ ವಿವಿಧ ಬಗೆಯ ಪದಾರ್ಥಗಳನ್ನು ತಯಾರಿಸಿ ತನ್ನ ಮಕ್ಕಳಿಗೆ ಉಣಿಸುತ್ತಾಳೆ. ಅವಳಿಗೆ ಎಲ್ಲ ಮಕ್ಕಳ ಮೇಲೂ ಸಮಾನವಾದ ಪ್ರೀತಿಯಿದ್ದರೂ, ಎಲ್ಲರಿಗೂ ಒಂದೇ ಬಗೆಯ ಪದಾರ್ಥವನ್ನು ನೀಡುವುದಿಲ್ಲ. ಏಕೆಂದರೆ ಎಲ್ಲರಿಗೂ ಒಂದೇ ಬಗೆಯ ಜೀರ್ಣಶಕ್ತಿ ಇರುವುದಿಲ್ಲ. ತುಂಬ ಕಡಮೆ ಜೀರ್ಣಶಕ್ತಿಯಿರುವ ಚಿಕ್ಕ ಮಕ್ಕಳಿಗೆ ಕೇವಲ ಮೀನಿನ ಸಾರನ್ನು ಉಣಿಸುತ್ತಾಳೆ. ಸ್ವಲ್ಪ ಬೆಳೆದವರಿಗೆ ಮೀನಿನ ಪಲ್ಯ, ದೊಡ್ಡ ಮಕ್ಕಳಿಗೆ ಅದರ ಪಲಾವ್ – ಹೀಗೆ ಅವರವರ ದೇಹಪ್ರಕೃತಿಗೆ ಅನುಸಾರವಾಗಿ ವಿವಿಧ ಬಗೆಯ ಪದಾರ್ಥಗಳನ್ನು ತಯಾರಿಸುತ್ತಾಳೆ. ಹಾಗೆಯೇ, ವಿವಿಧ ಬಗೆಯ ಧರ್ಮಸಾಧನೆಗಳು ವಿವಿಧ ಹಂತದ, ವಿವಿಧ ಬಗೆಯ ವ್ಯಕ್ತಿಗಳಿಗೆ ಅನ್ವಯವಾಗುತ್ತವೆ. ಅವರು ತಮ್ಮ ತಮ್ಮ ಧರ್ಮಸಾಧನೆಯಲ್ಲಿ ನಿರತರಾಗಿ ಅದರಲ್ಲೇ ಮುಂದುವರೆಯುತ್ತ ಮುಂದಿನ ಹಂತವನ್ನು ತಲುಪುತ್ತಾರೆ. ಆಗ ಆ ಹಂತಕ್ಕೆ ಸಂಬಂಧಿಸಿದ ಧರ್ಮಸಾಧನೆಯಲ್ಲಿ ತೊಡಗುತ್ತಾರೆ. ಆದರೆ ಕೆಳಗಿನ ಹಂತದಲ್ಲಿರುವವರು ಅನುಸರಿಸುತ್ತಿರುವ ಸಾಧನೆಯನ್ನು ನಿಕೃಷ್ಟವೆಂದು ಪರಿಗಣಿಸಿ, ಅದನ್ನು ಟೀಕಿಸುವುದರ ಮೂಲಕ ಅವರಲ್ಲಿ ಗೊಂದಲವನ್ನು ಉಂಟುಮಾಡಬಾರದು. ಇದನ್ನು ಶ್ರೀಕೃಷ್ಣನು ಒತ್ತಿ ಹೇಳುತ್ತಾನೆ:

**ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।**
**ಜೋಷಯೇತ್ ಸರ್ವಕರ್ಮಾಣಿ**
**ವಿದ್ವಾನ್ ಯುಕ್ತಃ ಸಮಾಚರನ್ ॥**

"ಕರ್ಮದಲ್ಲಿ ಆಸಕ್ತರಾದ ಅಜ್ಞಾನಿಗಳಲ್ಲಿ ಬುದ್ಧಿಭೇದವನ್ನು ಉಂಟುಮಾಡಬಾರದು. ಜ್ಞಾನಿಯು ಶಿಸ್ತಿನಿಂದ ಕರ್ಮಗಳನ್ನು ಆಚರಿಸುತ್ತ, ಅವರಿಂದಲೂ ಎಲ್ಲ ಕರ್ಮಗಳನ್ನೂ ಮಾಡಿಸಬೇಕು." (ಗೀತಾ ೩ : ೨೬)

ಶ್ರೀಶಂಕರಾಚಾರ್ಯರು 'ಬುದ್ಧಿಭೇದ' ಎಂಬ ಪದಕ್ಕೆ ಈ ಕೆಳಗಿನ ವಿವರಣೆ ನೀಡುತ್ತಾರೆ: **ಬುದ್ಧೇಃ ಭೇದೋ ಬುದ್ಧಿಭೇದಃ, ಮಯಾ ಇದಂ ಕರ್ತವ್ಯಂ, ಭೋಕ್ತವ್ಯಂ ಚ ಅಸ್ಯ ಕರ್ಮಣಃ ಫಲಮಿತಿ ನಿಶ್ಚಿತರೂಪಾಯಾಃ ಬುದ್ಧೇಃ ಭೇದನಂ ಚಾಲನಂ** – " 'ಬುದ್ಧಿಭೇದ'ವೆಂದರೆ ಬುದ್ಧಿ

ಯಲ್ಲಿ ಒಡಕನ್ನು ಉಂಟುಮಾಡುವುದು. 'ಇದು ನನ್ನ ಕರ್ತವ್ಯ, ಈ ಕರ್ಮಫಲವನ್ನು ನಾನು ಅನುಸರಿಸಬೇಕು' ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರುವುದು. ಇಂಥ ನಿಶ್ಚಯವನ್ನು ವಿಚಲಿತಗೊಳಿಸುವುದೇ ಬುದ್ಧಿಭೇದ." ಅನೇಕರು ಕರ್ಮಮಾರ್ಗವನ್ನು, ಅಂದರೆ ಅನೇಕ ಬಗೆಯ ದೇವತಾರ್ಚನೆಗಳನ್ನು, ಪೂಜೆವ್ರತಾದಿಗಳನ್ನು, ತೀರ್ಥ ಯಾತ್ರಾದಿಗಳನ್ನು ಅನುಸರಿಸುತ್ತಾರೆ. ಉನ್ನತ ಜ್ಞಾನಮಾರ್ಗವನ್ನು, ಭಗವತ್ಸಾಕ್ಷಾತ್ಕಾರದ ಉನ್ನತ ಆಧ್ಯಾತ್ಮಿಕ ಸಾಧನೆಗಳನ್ನು ಅನುಸರಿಸುವಷ್ಟು ಅವರ ಮನಸ್ಸು ಪಕ್ವವಾಗಿರುವುದಿಲ್ಲ. ಅವರಿಗೆ, 'ನೀವು ಮಾಡುತ್ತಿರುವುದೆಲ್ಲ ತಪ್ಪು' ಎಂದು ಹೇಳಿದರೆ, ಅವರ ನಂಬಿಕೆಯನ್ನು ಕೆಡಿಸಿದಂತಾಗುತ್ತದೆ, ಅವರ ಸ್ಥಿತಿ ಅತಂತ್ರವಾಗುತ್ತದೆ. ಅದರ ಬದಲು ಉನ್ನತ ಆಧ್ಯಾತ್ಮಿಕ ಆದರ್ಶವನ್ನು ಅವರ ಮುಂದಿರಿಸಿ, ಕ್ರಮೇಣ ಆ ಆದರ್ಶವನ್ನು ಅವರು ಗ್ರಹಿಸುವಂತೆಯೂ ಅನುಸರಿಸುವಂತೆಯೂ ಮಾಡಬೇಕು. ಮಗುವು ಬೊಂಬೆಗಳೊಡನೆ ಆಟವಾಡುತ್ತಿರುತ್ತದೆ. ಇದು ಸ್ವಾಭಾವಿಕ. ಇನ್ನೂ ಆಕರ್ಷಕವಾದ ಯಾವುದಾದರೊಂದನ್ನು ಅದಕ್ಕೆ ತೋರಿಸಿದರೆ, ಬೊಂಬೆಗಳನ್ನು ಬಿಸಾಕಿ ಅದನ್ನು ಹಿಡಿದುಕೊಳ್ಳಲು ಬರುತ್ತದೆ.

ಶ್ರೀರಾಮಕೃಷ್ಣರೊಡನೆ ವಿಗ್ರಹಾರಾಧನೆಯ ಬಗ್ಗೆ ಸಂಭಾಷಣೆ ನಡೆಯುತ್ತಿರುವಾಗ ಮಹೇಂದ್ರನಾಥ ಗುಪ್ತರು ಹೀಗೆ ಹೇಳುತ್ತಾರೆ: "ಯಾರು ಮಣ್ಣಿನ ಪ್ರತಿಮೆಯನ್ನು ಪೂಜಿಸುತ್ತಾರೋ ಅವರಿಗೆ ತಿಳಿಸಿಕೊಡಬೇಕಾಗುತ್ತದೆ, 'ಮಣ್ಣಿನ ಪ್ರತಿಮೆಯೇ ಭಗವಂತನಲ್ಲ, ಅದನ್ನು ಪೂಜಿಸುತ್ತಿದ್ದಾಗ ಭಗವಂತನನ್ನು ಉದ್ದೇಶಿಸಿ ಪೂಜಿಸಬೇಕೇ ವಿನಾ ಅದನ್ನೇ ಅಲ್ಲ. ಮಣ್ಣನ್ನು ಪೂಜಿಸುವುದು ಸೂಕ್ತವಲ್ಲ' ಎಂದು." ಇದಕ್ಕೆ ಶ್ರೀರಾಮಕೃಷ್ಣರು ಅಸಹನೆಯಿಂದ ಹೇಳುತ್ತಾರೆ: "ನಿಮ್ಮ ಕಲ್ಕತ್ತದ ಜನರಿಗೆಲ್ಲ ಇದೊಂದೇ ಹುಚ್ಚು – ಕೇವಲ ಲೆಕ್ಚರ್ ಕೊಡೋದು, ಇನ್ನೊಬ್ಬರ ಹೃದಯಕ್ಕೆ ಬೆಳಕು ತೋರೋದು! ಮೊದಲು ತಮ್ಮ ಹೃದಯಕ್ಕೆ ಯಾವ ರೀತಿ ಬೆಳಕು ತಂದುಕೊಳ್ಳುವುದು ಎಂಬುದರ ಯೋಚನೆಯೇ ಇಲ್ಲ. ಪರರಿಗೆ ತಿಳಿವಳಿಕೆ ಕೊಡಲು ನೀವು ಯಾರು? ... ಒಂದು ಮಣ್ಣಿನ ಪ್ರತಿಮೆಯನ್ನು ಪೂಜಿಸುವುದು ಸರಿಯಲ್ಲ ಅಂತ ಇಟ್ಟುಕೊಂಡರೂ, ಅದರ ಮೂಲಕ ತನ್ನ ಪೂಜೆಯೇ ನಡೆಯುತ್ತಿದೆ ಎಂಬುದನ್ನು ಭಗವಂತನು ಅರಿಯನೇ? ಆತ ಆ ವಿಧದ ಪೂಜೆಯಿಂದಲೇ ಸಂತುಷ್ಟನಾಗುತ್ತಾನೆ. ಅದಕ್ಕೇಕೆ ತಲೆನೋವು? ಮೊದಲು ನಿನಗೆ ಯಾವುದರಿಂದ ಜ್ಞಾನ ಭಕ್ತಿ ದೊರೆಯಬಹುದು, ಅದಕ್ಕಾಗಿ ಪ್ರಯತ್ನಿಸು. ನೀನು ಮಣ್ಣಿನ ಪ್ರತಿಮೆಯನ್ನು ಪೂಜಿಸುವ ಸಂಬಂಧವಾಗಿ ಮಾತೆತ್ತಿದೆ. ಪ್ರತಿಮೆ ಮಣ್ಣಿನದಾದರೂ ಆ ವಿಧದ ಪೂಜೆಯ ಆವಶ್ಯಕತೆ ಇದೆ. ಬಗೆಬಗೆಯ ಜನರ ಸಾಮರ್ಥ್ಯಕ್ಕೆ ಸರಿಹೊಂದುವಂತೆ ಹಲವಾರು ಬಗೆಯ ಪೂಜಾಕ್ರಮಗಳನ್ನು ಭಗವಂತನು ಏರ್ಪಡಿಸಿದ್ದಾನೆ" (ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು ೫–೬).

ಇದೇ ಭಾವನೆಯನ್ನು ವ್ಯಕ್ತಪಡಿಸುವ ಕಥೆಯೊಂದನ್ನು ಸೂಫಿ ಸಂತನಾದ ಜಲಾಲ್ ಉಲ್ ದಿನ್ ರೂಮಿ ಹೇಳುತ್ತಾನೆ:



"ಮೋಸೆಸ್ ಒಮ್ಮೆ ಗುಡ್ಡಗಾಡು ಪ್ರದೇಶದಲ್ಲಿ ಪ್ರಯಾಣ ಮಾಡುತ್ತಿದ್ದ. ಆಗ ಇಂಪಾದ ಕೊಳಲ ನಾದವು ದೂರದಿಂದ ಗಾಳಿಯಲ್ಲಿ ತೇಲಿಬರುತ್ತಿರುವುದನ್ನು ಆಲಿಸಿದ. ಆ ನಿಸರ್ಗದ ಸೊಬಗು ಹಾಗೂ ಕೊಳಲಿನ ನಾದ – ಎರಡೂ ಸೇರಿ ಅವನ ಮನಸ್ಸನ್ನು ಸೂರೆಗೊಂಡವು. ಕೊಳಲಿನ ಕೋಮಲ ಧ್ವನಿ ಅವನ ಮನಸ್ಸನ್ನು ಅತ್ತಕಡೆ ಎಳೆಯತೊಡಗಿತು. ಅವನು ಆ ಧ್ವನಿಯನ್ನು ಅನುಸರಿಸಿ ಮುಂದೆ ಸಾಗಿದ. ಮುಂದೆ ಆತನು ಕಂಡ ದೃಶ್ಯ ಇನ್ನೂ ಚಿತ್ತಾಕರ್ಷಕ. ಆ ನಿಸರ್ಗ ಸೌಂದರ್ಯದ ಹಿನ್ನೆಲೆಯಲ್ಲಿ ಹುಡುಗನೊಬ್ಬನು ಕೊಳಲನ್ನೂದುತ್ತ, ಆ ಕುರಿಗಳನ್ನು ಸಂತೋಷಪಡಿಸುತ್ತಿದ್ದಾನೆ – ಸೌಂದರ್ಯ ಆನಂದಗಳ ಮೇಳ. ಮೋಸೆಸ್ ಮಂತ್ರಮುಗ್ಧನಾಗಿ ಆ ದೃಶ್ಯವನ್ನೇ ನೋಡುತ್ತ ನಿಂತುಬಿಟ್ಟನು.

ಸ್ವಲ್ಪ ಹೊತ್ತಿನಲ್ಲಿಯೇ ದೃಶ್ಯ ಬದಲಾಯಿತು. ಹುಡುಗನು ಕೊಳಲನ್ನು ಬದಿಗಿಟ್ಟು ಮಂಡಿಯೂರಿ ಕೈಮುಗಿದು ಅತ್ಯಂತ ಭಕ್ತಿಭಾವದಿಂದ ದೇವರನ್ನು ಪ್ರಾರ್ಥಿಸತೊಡಗಿದನು: "ಭಗವಂತನೆ, ನೀನೆಲ್ಲಿರುವೆ? ಹೇಳು! ನಿನ್ನ ಸೇವೆಗಿಂತ ಮಿಗಿಲಾದುದಾವುದನ್ನೂ ನಾನು ಬಯಸುವುದಿಲ್ಲ. ನಾನು ನಿನ್ನ ಸೇವಕನಾಗಿ ಪ್ರತಿದಿನ ನಿನ್ನ ಸೇವೆಯನ್ನು ಮಾಡುತ್ತೇನೆ. ನೀನು ಬೆಳಗೆದ್ದಾಗ ನಿನಗೆ ಆ ದಿನದ ಬಿಸಿ ಬಿಸಿ ಹಾಲನ್ನು ತಂದುಕೊಡುತ್ತೇನೆ. ಸ್ನಾನಕ್ಕಾಗಿ ನೀರನ್ನು ಬಿಸಿ ಮಾಡುತ್ತೇನೆ. ನಿನಗೆ ಸ್ನಾನ ಮಾಡಿಸುತ್ತೇನೆ. ನಿನ್ನ ತಲೆಬಾಚಿ ಕೂದಲನ್ನು ಒಪ್ಪವಾಗಿರಿಸುತ್ತೇನೆ. ನಿನಗೆ ರುಚಿಕರವಾದ ಅಡಿಗೆಯನ್ನು ಮಾಡಿ ಬಡಿಸುತ್ತೇನೆ. ನಿನ್ನ ಬೂಟ್ಸನ್ನು ನಯಗೊಳಿಸುತ್ತೇನೆ. ನಿನ್ನ ಬಟ್ಟೆಗಳನ್ನು ಓರಣವಾಗಿರಿಸುತ್ತೇನೆ. ನಿನ್ನ ಕೊಠಡಿಯನ್ನು ಶುಚಿಗೊಳಿಸುತ್ತೇನೆ. ನೀನು ಅವಕಾಶಕೊಟ್ಟಾಗ ನಿನ್ನ ಕಾಲೊತ್ತುತ್ತೇನೆ. ನಿನ್ನ ಕೈಗೆ ಮುತ್ತಿಡುತ್ತೇನೆ. ಹೇ ಪ್ರಭು, ನೀನು ನಿನ್ನ ಸಖ, ನನ್ನ

ಪ್ರಭು, ದಿನವಿಡೀ ನನ್ನ ಸುಖದುಃಖಗಳನ್ನು ನಿನ್ನ ಮುಂದೆ ಹೇಳಿಕೊಳ್ಳುತ್ತೇನೆ. ನನ್ನನ್ನೂ ಈ ಕುರಿಗಳನ್ನೆಲ್ಲವನ್ನೂ ನಿನಗೇ ಅರ್ಪಿಸುತ್ತೇನೆ. ನೀನೆಲ್ಲಿರುವೆ, ಹೇಳು."

ಇದನ್ನು ಕೇಳುತ್ತಿದ್ದಂತೆಯೇ ಮೋಸೆಸನ ಮುಖದಲ್ಲಿ ಬದಲಾವಣೆ ಉಂಟಾಯಿತು. ಪ್ರಸನ್ನಮುಖವು ಕೋಪೋದ್ರಿಕ್ತವಾಯಿತು. ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಹುಡುಗನಿಗೆ ಒಂದು ಹೊಡೆದು, ಕಿಡಿಕಾರುವ ಧ್ವನಿಯಲ್ಲಿ ಒದರತೊಡಗಿದನು: "ಮೂರ್ಖ! ಯಾರೊಡನೆ ನೀನು ಹೀಗೆ ಮಾತನಾಡುತ್ತಿದ್ದೀಯೆ? ನೀನು ನಾಸ್ತಿಕನಂತೆ ಅರಚುತ್ತಿದ್ದೀಯಲ್ಲೋ! ಎಂಥ ಪಾಷಂಡತನ! ನೀನು ನಂಬಿಕೆಯ ರೇಷ್ಮೆಬಟ್ಟೆಯನ್ನು ಚಿಂದಿಬಟ್ಟೆಯಾಗಿಸುತ್ತಿರುವೆ. ನಿನ್ನ ಕುರಿಯ ಹಾಲನ್ನು ಕುಡಿಯುವುದಕ್ಕೆಂದೇ ದೇವರಿಗೆ ಬಾಯಿರುವುದೇ, ಅವನಿಗೆ ತಲೆಕಾಲುಗಳಿರುವುವೆ? ನಿನ್ನ ಆರೈಕೆಯನ್ನು ಬಯಸುವ ನಿನ್ನ ಮುದಿ ಮಾವನೆಂದುಕೊಂಡೆಯಾ ದೇವರನ್ನು! ಯಾರು ಹುಟ್ಟಿ ಸಾಯುತ್ತಾನೋ, ಅವರಿಗೆ ಆಗಾಗ ಆರೈಕೆಗಳು ಬೇಕು, ಅಷ್ಟೇ. ದಡ್ಡ ಶಿಖಾಮಣಿ! ಏಳು, ನಿನ್ನ ಬುದ್ಧಿಯನ್ನು ಬದಲಾಯಿಸಿಕೊ."

ಈ ಮಾತುಗಳನ್ನು ಕೇಳಿದ ಮೇಲೆ ಪಾಪ, ಆ ಹುಡುಗನ ನಯನಜ್ಯೋತಿ ಮಂದವಾಯಿತು; ಅವನ ಮುಖಮಂಡಲ ನಿರಾಸೆಯಿಂದ ಮುದುಡಿತು; ಹೊರಗಿನ ಸುಂದರ ಪ್ರಕೃತಿ ಮರಳುಗಾಡಾಯಿತು; ಆಶಾದಾಯಕ ಪ್ರಪಂಚ ಕರಗಿಹೋಯಿತು. ಎಲ್ಲ ಕಳಚಿಹೋಗುತ್ತಿರುವಂತೆ ಅವನಿಗನಿಸಿತು.

ಹೀಗೆ ಮುಗ್ಧ ಬಾಲಕನ ಮನಕೆಡಿಸಿ ಮೋಸೆಸನು ಏನೋ ಸಾಹಸ ಮಾಡಿದವನಂತೆ ಮುಂದೆ ಸಾಗಿದನು. ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಭಗವದ್ವಾಣಿ ಗುಡುಗಿನಂತೆ ಅವನ ಕಿವಿಯಲ್ಲಿ ಮೊಳಗತೊಡಗಿತು: "ಮೋಸೆಸ್, ನೀನು ಪ್ರವಾದಿಯಾಗಿ ಒಗ್ಗೂಡಿಸುವುದಕ್ಕೆ ಬಂದಿರುವೆಯೋ, ಇಲ್ಲಾ ಛಿದ್ರಛಿದ್ರಗೊಳಿಸುವುದಕ್ಕೋ? ನನ್ನ ಸೇವಕನನ್ನು ದೂರ ಸರಿಸಿರುವೆ. ನಮ್ಮ ಹೃದಯಗಳನ್ನು ಹರಿದುಹಾಕಿರುವೆ." ಮೋಸೆಸ್ ತನ್ನನ್ನು ಸಮರ್ಥಿಸಿಕೊಳ್ಳತೊಡಗಿದ: "ಅದು ಹೇಗೆ? ನಾನು ಸತ್ಯವನ್ನೇ ಹೇಳಿದೆನಲ್ಲವೇ? ಜನರು ತಮ್ಮ ಬುದ್ಧಿಗೆ ಅನುಗುಣವಾಗಿ ನಿನಗೆ ಮಿತಿಯನ್ನು ಕಲ್ಪಿಸುತ್ತಾರೆ." ಭಗವದ್ವಾಣಿ ಹೇಳಿತು: "ಪ್ರತಿಯೊಬ್ಬರ ತಿಳಿವಳಿಕೆ ಮತ್ತು ಮನೋಭಾವಕ್ಕೆ ಅನುಗುಣವಾಗಿ ನಾನು ವಿವಿಧ ನಂಬಿಕೆಗಳ ಮತ್ತು ಪೂಜಾವಿಧಾನಗಳ ವ್ಯವಸ್ಥೆ ಮಾಡಿದ್ದೇನೆ. ನನಗೆ ಪೂಜೆಯಿಂದ ಏನಾಗಬೇಕಾಗಿದೆ? ಜೀವಿಗಳಿಗೆ ನಾನು ಪ್ರಾರ್ಥನೆ ಪೂಜೆಗಳನ್ನು ಅನುಗ್ರಹಿಸಿರುವುದು ಏತಕ್ಕೆಂದರೆ, ಪ್ರೀತಿಯ ದಾರದ ಮೂಲಕ ಅವರು ನನಗೆ ಬಂಧಿತರಾಗಲಿ ಎಂದು. ಹಿಂದೂ ತನ್ನದೇ ರೀತಿಯಲ್ಲಿ ನನ್ನನ್ನು ಪೂಜಿಸುತ್ತಾನೆ. ಯಹೂದಿಯೂ ತನ್ನದೇ ರೀತಿಯಲ್ಲಿ ನನ್ನನ್ನು ಆರಾಧಿಸುತ್ತಾನೆ. ಅವರಿಗೆ ತಿಳಿದಂತೆ ಅವರು ಪ್ರಾರ್ಥನೆ ಸಲ್ಲಿಸಲಿ. ನಾನು ನೋಡುವುದು ಆಂತರಿಕ ವ್ಯಾಕುಲತೆಯನ್ನು. ವಿರಹ ವ್ಯಾಕುಲತೆಯಿಂದ ಯಾರು ಕುದಿಯುತ್ತಿರುತ್ತಾರೋ, ಅವರು ನನಗೆ ಅತ್ಯಂತ ಪ್ರಿಯರು. ಪೂಜೆಯ ವಿಧಾನ ಮತ್ತು ನಿಯಮಗಳ ಕಡೆ ಗಮನ ಕೊಡಬೇಡ, ನಿನಗೆ ಸಾಧ್ಯವಾದಷ್ಟು ನನ್ನನ್ನು ಪ್ರೀತಿಸು (*Pilgrimage to paradise* by Kamala K Kapur, p.42).

ಶ್ರೀಕೃಷ್ಣನ ಕೆಳಗಿನ ವಾಣಿಯಲ್ಲಿಯೂ ಈ ಮೇಲಿನ ಅಭಿಪ್ರಾಯವೇ ವ್ಯಕ್ತವಾಗಿರುವುದನ್ನು ಕಾಣಬಹುದು:

**ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ।**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥**
**(೪ : ೧೧)**

"ಯಾರು ಹೇಗೆ ನನ್ನನ್ನು ಆಶ್ರಯಿಸುತ್ತಾರೋ, ಅವರನ್ನು ಹಾಗೆಯೇ ನಾನು ಅನುಗ್ರಹಿಸುತ್ತೇನೆ. ಎಲೈ ಅರ್ಜುನ, ಮನುಷ್ಯರು ಸರ್ವಪ್ರಕಾರಗಳಿಂದಲೂ ನನ್ನ ಮಾರ್ಗವನ್ನೇ ಅನುಸರಿಸುತ್ತಿರುವರು."

ಅಜ್ಞಾನಿಗಳ ಮನಸ್ಸನ್ನು ಕೆಡಿಸಬಾರದೆಂದು ಶ್ರೀಕೃಷ್ಣ ಹೇಳುತ್ತಾನೆ. ಅವರನ್ನು ನಿಧಾನವಾಗಿ ಹಂತಹಂತವಾಗಿ ಜ್ಞಾನದ ಬೆಳಕಿನೆಡೆಗೆ ಕರೆದುಕೊಂಡು ಬರಬೇಕು, ಯಾರನ್ನೂ ನಿಂದಿಸಬಾರದು. "ಸಂತನಿಗೂ ಒಂದು ಭೂತಕಾಲವಿರುತ್ತದೆ, ಪಾಪಿಗೂ ಭವಿಷ್ಯವಿರುತ್ತದೆ" ಎಂಬ ಆಂಗ್ಲ ಭಾಷೆಯ ಹೇಳಿಕೆಯನ್ನು ಮರೆಯಬಾರದು. ಕತ್ತಲೆಯಲ್ಲಿರುವವನನ್ನು ನಿಂದಿಸಿ ಪ್ರಯೋಜನವಿಲ್ಲ. ಸಾಧ್ಯವಾದರೆ ಅವನ ಕೈಹಿಡಿದು ಬೆಳಕಿನೆಡೆಗೆ ಕರೆದುಕೊಂಡು ಬರಬೇಕು. ಶ್ರೀಕೃಷ್ಣನು ಹೀಗೆ ಹೇಳುತ್ತಾನೆ:

**ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು ।**
**ತಾನಕೃತ್ಸ್ನವಿದೋ ಮಂದಾನ್ ಕೃತ್ಸ್ನವಿನ್ನವಿಚಾಲಯೇತ್॥**
**(೩: ೨೯)**

"ಪ್ರಕೃತಿಯ ಗುಣಗಳಿಂದ ಭ್ರಮೆಹೊಂದಿದವರು ಗುಣಕರ್ಮಗಳಲ್ಲಿ ಆಸಕ್ತರಾಗುತ್ತಾರೆ. ಸರ್ವವನ್ನೂ ತಿಳಿದವರು ಈ ಅಲ್ಪಜ್ಞರಲ್ಲಿ ಬುದ್ಧಿಭೇದವನ್ನು ಉಂಟುಮಾಡಬಾರದು."

ಬಿಲ್ಲುವಿದ್ಯೆ ಕಲಿಯುವವನು ಮೊದಲು ಬಾಳೆಯ ಗಿಡಕ್ಕೆ ಹೊಡೆಯುತ್ತಾನೆ. ಕೊನೆಯಲ್ಲಿ ಹಾರುವ ಹಕ್ಕಿಗೆ ಹೊಡೆಯುತ್ತಾನೆ. ಮೊದಲೇ ಹಾರುವ ಹಕ್ಕಿಗೆ ಗುರಿಯಿಡಲಾಗುವುದಿಲ್ಲ. ಹಾಗೆಯೇ ಆಧ್ಯಾತ್ಮಿಕ ಜೀವನದಲ್ಲಿ ಹಂತಹಂತವಾಗಿ ಮುಂದುವರೆಯಬೇಕು. ಪುಸ್ತಕಗಳನ್ನು ಓದುವುದರಿಂದ ಏನೂ ಪ್ರಯೋಜನವಿಲ್ಲ. ಭಗವತ್ಸಾಕ್ಷಾತ್ಕಾರವೇ ಮುಖ್ಯ ಎಂದು ಹೇಳಿ ಎಲ್ಲರ ತಲೆಕೆಡಿಸುವುದು ತಪ್ಪು. ಕೆಲವರು ಸಂಸಾರಜೀವನವನ್ನು ಅತಿಯಾಗಿ ನಿಂದಿಸಿ, ಸಂನ್ಯಾಸಜೀವನದ ಆದರ್ಶವನ್ನು ಎತ್ತಿಹಿಡಿದು ಅನೇಕರ ತಲೆಕೆಡಿಸುತ್ತಾರೆ. ಅನೇಕರ ಅನೇಕ ಬಗೆಯ ಉಪನ್ಯಾಸಗಳನ್ನು ಕೇಳುವುದರಿಂದಲೂ ಬುದ್ಧಿಭೇದ ಉಂಟಾಗಬಹುದು. ಮಹೇಂದ್ರನಾಥ ಗುಪ್ತರು ಒಮ್ಮೆ ಕೇಶವಚಂದ್ರ ಸೇನನ ಉಪನ್ಯಾಸವನ್ನು ಕೇಳಿ ದಕ್ಷಿಣೇಶ್ವರಕ್ಕೆ ಬಂದು ಆ ಉಪನ್ಯಾಸವನ್ನು ತುಂಬ ಕೊಂಡಾಡಿದಾಗ, ಶ್ರೀರಾಮಕೃಷ್ಣರು ದೃಢವಾಗಿ ಹೇಳಿದರು: "ನೀನು ಸುಮ್ಮನೆ ಅಲ್ಲಿಗಿಲ್ಲಿಗೆ ಅಲೆಯಬೇಡ. ಇಲ್ಲಿಗೇ ಬರುತ್ತಿರು. ಯಾರು ಅಂತರಂಗಿಗಳೋ ಅವರು ಇಲ್ಲಿಗೇ ಬರುತ್ತಾರೆ." ಅವರ ಈ ಆದೇಶಕ್ಕೆ ಕಾರಣ, ಪ್ರಾರಂಭದಲ್ಲಿ ಎಲ್ಲ ಬಗೆಯ ಉಪನ್ಯಾಸವನ್ನು ಕೇಳಿದರೆ, ಎಲ್ಲ ಬಗೆಯ